ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

(ಖಂಡ 2ರಿಂದ 4 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ.—

ಅಧ್ಯಕ್ಷರು.—ಪ್ರಸಾವ ಏನೆಂದರೆ: '' 1ನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ, ಹೆಸರು ಮತ್ತು ಅವತರಣಿಕೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗ ವಾಗಿರುತ್ತದೆ.''

ಪ್ರಸ್ತಾವನೆಯನ್ನು ಅಂಗೀಕರಿಸಲಾಯಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ, ಹೆಸರು ಮತ್ತು ಅವತರಣಿಕೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎ. ಲಕ್ಷ್ಮೀಸಾಗರ್ (ಮುಖ್ಯಮಂತ್ರಿಗಳ ಪರವಾಗಿ).—''ಗೌರವನೀಯ ಇಸವಿಯ ಕರ್ನಾಟಕ ರಾಜ್ಯದ ಧನವಿನಿಯೋಗಕ್ಕೆ ಸಂಬಂಧಿಸಿದ (ಸಂಖ್ಯೆ: 2) ವಿಧೇಯಕವನ್ನು ಸಭೆಯು ಅಂಗೀಕರಿಸ ಬೇಕೆಂದು ಕೇಳಿಕೊಳ್ಳುತ್ತೇನೆ.''

ಅಧ್ಯಕ್ಷರು.—ಪ್ರಸ್ತಾಪ ಏನೆಂದರೆ: ''ಗೌರವನೀಯ ಇಸವಿಯ ಕರ್ನಾಟಕ ರಾಜ್ಯದ ಧನವಿನಿಯೋಗಕ್ಕೆ ಸಂಬಂಧಿಸಿದ (ಸಂಖ್ಯೆ:2) ವಿಧೇಯಕವನ್ನು ಅಂಗೀಕರಿಸುವುದು.''

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಒಪ್ಪಿಗೆ ನೀಡಲಾಯಿತು

ವಿತ್ತೀಯ ಕಾರ್ಯಕಲಾಪಗಳು

Supplementary Estimates for the year 1985-86

(First Instalment)

Prsentation

SRI A. LAKSMISAGAR (on behalf of Chief Minister).—I beg to present the Supplementary Estimates for the year 1985-86 (First Instalment) as required under Article 205(1) of the Constitution of India.

Mr Speaker.—Supplementary Estimates prsented.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ನಮ್ಮ ತಕರಾರು ಏನೂ ಇಲ್ಲ. ತಪಗೆ ಗೊತ್ತಿರುವಹಾಗೆ. ಪೂರಕ ಅಂದಾಜುಗಳ ಮೇಲೆ ಇದೇ ದಿನವೇ ಚರ್ಚೆಗೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲ, ನಾಳೆ ತೆಗೆದುಕೊಳ್ಳೋಣ.

ಇದು ಬಹಳ ದೊಡ್ಡ ವಿಚಾರ. ಇದರ ಬಗ್ಗೆ ಚರ್ಚೆಯನ್ನು ನಾಳೆ ಬೆಳಿಗ್ಗೆ ತೆಗೆದುಕೊಳ್ಳೋಣ. ಈಗ ತಾನೇ ಕೊಟ್ಟಿದ್ದೀರಿ ಈಗಲೇ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ. ಹಿಂದೆಯೂ ಕೂಡ ಕಾಲಾವಕಾಶ ವನ್ನು ಕೊಟ್ಟು ಇಂತಹ ವಿಷಯಗಳನ್ನು ಚರ್ಚೆಗೆ ತೆಗೆದುಕೊಳ್ಳಲಾಗಿದೆ. ಈಗ ಉಳಿದ ಬಿಲ್‌ಗಳನ್ನು ತೆಗೆದುಕೊಳ್ಳೋಣ.

ಶ್ರೀ ಎ. ಲಕ್ಷ್ಮೀಸಾಗರ್.—ನಿನ್ನೆ ಸಂಜೆ ಆದಂತಹ ಒಪ್ಪಂದದ ಪ್ರಕಾರ, ಆ ಸಭೆಯಲ್ಲಿ ಮಾನ್ಯ ಅಧ್ಯಕ್ಷರೂ ಇದ್ದರು, ಎಂ.ಎಸ್. ಪಾಟೀಲ್‌ರವರು ಹಾಜರಿದ್ದರು.

ಶ್ರೀ ಎಂ.ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೆ, ನಾನು ಒಪ್ಪಿದ್ದೇನೆಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ.

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ.—ಈಗ ಸಪ್ಲಿಮೆಂಟರಿ ಎಸ್ಟಿಮೇಟ್‌ನ್ನು ಸಭೆಯ ಮುಂದಿಟ್ಟು, ಅದನ್ನು ಈಗಲೇ ಯಾರೂ ಪಾಸ್ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ನಿನ್ನೆ ಆದಂತಹ ತೀರ್ಮಾನದ ಪ್ರಕಾರ ಅಪ್ರೊಪ್ರಿಯೇಷನ್ ಬಿಲ್ ಇಂಟರ್‌ಡ್ಯೂಸ್ ಮಾಡಿ ಅದು ಪಾಸ್ ಆಗಬೇಕೆಂದೂ, ಆದರ ಜೊತೆಗೆ ಸಪ್ಲಿಮೆಂಟರಿ ಎಸ್ಟಿಮೇಟ್ ಅನ್ನು ನಿನ್ನೆಯ ಆಜೆಡದಲ್ಲಿ ಇಂಡರ್‌ಡ್ಯೂಸ್ ಮಾಡಿದ್ದರೆ ನಿನ್ನೆಯೇ ಚರ್ಚೆ ಮಾಡಬೇಕಾಗಿತ್ತು. ಸಭೆಯನ್ನು ಮುಂದೂಡುವುದಕ್ಕೆ ಮುಂಚೆ ಮಾನ್ಯ ಮುಖ್ಯಮಂತ್ರಿಗಳು ಒಂದು ಪರತ್ತನ್ನು ಹಾಕಿ ಇದನ್ನು ಚರ್ಚೆಯಿಲ್ಲದೆ ಪಾಸ್ ಮಾಡಬೇಕೆಂದು ಹೇಳಿದ್ದಾರೆ. ನಾಳೆ ಬೆಳಿಗ್ಗೆ ೯ ಗಂಟೆಗೆ ಸಭೆ ಸೇರಿ ೯ ಗಂಟೆಯಿಂದ ೨ ಗಂಟೆಯವರೆಗೆ ಡಿಮ್ಯಾಂಡ್‌ಗಳನ್ನು ಪಾಸ್ ಮಾಡಬೇಕೆಂದೂ ಆಮೇಲೆ ಚರ್ಚೆ ಇಲ್ಲದೆ ಅಪ್ರೊಪ್ರಿಯೇಷನ್ ಬಿಲ್ ಮತ್ತು ಸಪ್ಲಿಮೆಂಟರಿ ಎಸ್ಟಿಮೇಟ್ ಅನ್ನು ಪಾಸ್ ಮಾಡಬೇಕೆನ್ನುವ ಮಾತನ್ನು ಹೇಳಿದ್ದಾರೆ. ಆಗ ಮಾನ್ಯ ಎಂ.ಎಸ್. ಪಾಟೀಲರು ಹಾಜರು ಇದ್ದರು. ಈಗ ಆದಕ್ಕೆ ವಿರುದ್ಧವಾಗಿ ಹೋಗಬಾರದು. ತಾವು ಕೊಟ್ಟ ಮಾತನ್ನು ಉಳಿಸಿಕೊಳ್ಳಬೇಕೆಂದು ಹೇಳಿದ್ದೇನೆ. ಮಾನ್ಯ ಎಂ.ಎಸ್. ಪಾಟೀಲ್‌ರವರು ಆಗಲಿ ಎಂದು ಹೇಳಿದ್ದಾರೆ. ಮಾನ್ಯ ಖಿರ್ಗಿಯವರು ಸಹ ಇದ್ದರು. The suplimentary grants being the grants to meet the expenditure on new services, unforseen expenditure as contemplated under Article 205(1) of the Constitution. I have had also an occastion while Mr. Moily was the Minister for Finance I said alright you go ahead. I did not argue on this matter.

SRI K. H. SRINIVAS.—Whatever may be the oppotunity you have always utilised to speak.

SRI A. LAKHAMI SAGAR.—This is the understanding that we arrived at. These demands should also go to the other House Tomorrow is the last date. So I only appeal to the Members and in particular to my learned friend Sri Bangarappa to acced to my request.

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಅಧ್ಯಕ್ಷರೆ, ಇದು ಒಂದು ಹೊಸ ಪರಂಪರೆಯನ್ನು ಹಾಕಬೇಕೆಂದು ಮಾನ್ಯ ಸಂಸದೀಯ ಸಚಿವರು ಹೇಳುತ್ತಾ ಇದ್ದಾರೆ. ಮಾನ್ಯ ಅಧ್ಯಕ್ಷರು ಈ ಸದನದ ಕಾರ್ಯಕಲಾಪಕ್ಕೆ ಹೊಸಬರೇನಲ್ಲ, ಹೆಚ್ಚಿನ ಚರ್ಚೆಯಿಲ್ಲದೆ ಕೆಲವೊಂದು ವಿಷಯಗಳು ಮಂಜೂರು ಆಗುತ್ತವೆ. ಅಪ್ರೊಪ್ರಿಯೇಷನ್ ಬಿಲ್ ಚರ್ಚೆಯಿಲ್ಲದೆ ಮಂಜೂರಾತಿಯನ್ನು ಪಡೆದಿದೆ. ಇದು ಹೊಸಏಟಂ ಇದೆ. ಇದು ಇನ್ನೂ ಚರ್ಚೆಯಾಗಿಲ್ಲ. ಯಾವುದೇ ಡಿಮಾಂಡ್‌ನಲ್ಲಿ ಈ ವಿಚಾರ ಬರುವುದಿಲ್ಲ. ಇದೊಂದು ಹೊಸ ವಿಚಾರ. This 80 crores it is not contemplated under the budget or any department. ಹೀಗೆ ಇರುವಾಗ, ಇದರ ಬಗ್ಗೆ ಚರ್ಚೆಯಾಗ ಬೇಕಾಗಿದೆ. ಸಪ್ಲಿಮೆಂಟರಿ ಎಸ್ಟಿಮೇಟ್ ಅನ್ನು ಚರ್ಚೆ ಇಲ್ಲದೆ ಎಲ್ಲಿಯೂ ಪಾಸ್ ಮಾಡಿರುವುದು ಇಲ್ಲ. ಚರ್ಚೆ ಮಾಡಿದೆ ಪಾಸ್ ಮಾಡಿದರೆ ಒಂದು ದೊಡ್ಡ ಅಪವಾದದ ಹೊರೆಯನ್ನು ಹೊತ್ತುಕೊಂಡು ಹೋಗಬೇಕಾಗುತ್ತದೆ. ಈ ತರಹ ಯಾವಾಗಲೂ ಆಗಿಲ್ಲ. ದಾಕ್ಷಿಣ್ಯದ ಬಲೆಯಲ್ಲಿ ಸಿಕ್ಕಿಸುವಂತಹ ಕೆಲಸವನ್ನು ತಾವು ಮಾಡಬಾರದು. ಪರಂಪರೆಯನ್ನು ನಾವು ಕಾಪಾಡಿಕೊಂಡು ಬರಬೇಕಾಗುತ್ತದೆ.

SRI A. LAXMI SAGAR.—May I make a suggestion. This item may be taken at the end of the agenda, mean while they will have the opportunity to go through. ಇವೊತ್ತಿನ ದಿವಸದ ಕಾರ್ಯಕ್ರಮದ ಪಟ್ಟಿಯ ಕೊನೆಯಲ್ಲಿ ಇದನ್ನು ತೆಗೆದುಕೊಳ್ಳೋಣ. ಸನ್ಮಾನ್ಯ ಸದಸ್ಯರು ಇದನ್ನು ಪರಾಂಬರಿಸುವುದಕ್ಕೆ ಅವಕಾಶವಿದೆ.

ಶ್ರೀ ಎಂ. ವೀರಪ್ಪಮೊಯಿಲಿ.—ಸಭೆಯ ಹೊರಗಡೆ ಸದಸ್ಯರನ್ನು ಅಪಹಾಸ್ಯಕ್ಕೆ ಗುರಿ ಮಾಡುವಂತಹ ಕೆಲಸವನ್ನು ತಾವು ಮಾಡಬೇಡಿ. ಇದನ್ನು ನೋಡದೆ ಪಾಸ್ ಮಾಡಿದರೆ ನಾವು ಅಪಹಾಸ್ಯಕ್ಕೆ ಗುರಿಯಾಗಬೇಕಾಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಯಾರೂ ಆ ರೀತಿ ಮಾಡುವುದಿಲ್ಲ,

ಶ್ರೀ ಎಂ. ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೆ, ನಿನ್ನೆ ಸಾಯಂಕಾಲ ನಡೆದಂತಹ ಸಭೆಯಲ್ಲಿ ನಾನೂ ಇದ್ದೆ. ನನ್ನ ಹೆಸರನ್ನು ಮಂತ್ರಿಗಳು ಪ್ರಸ್ತಾಪ ಮಾಡಿದ್ದಾರೆ, ಅದು ರೇಕಾರ್ಡ್‌ನಲ್ಲಿ ಹಾಗೆಯೇ ಉಳಿದುಕೊಳ್ಳುತ್ತದೆ. ನಾನು ಒಂದು ನಿಮಿಷ ಹೇಳುವುದಕ್ಕೆ ಅವಕಾಶ ಕೊಡಿ. ಅಪ್ರೋಪ್ರಿಯೇಷನ್ ಬಿಲ್‌ನ್ನು ಡಿವ್ಯಾಂಡ್‌ಗಳು ಪಾಸ್ ಆದಮೇಲೆ ಪಾಸ್ ಮಾಡಿಕೊಡಬೇಕೆಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ಸಪ್ಲಿಮೆಂಟರಿ ಎಸ್ಟಿಮೇಟ್ ಅನ್ನು ಚರ್ಚೆಯಿಲ್ಲದೆ ಪಾಸ್ ಮಾಡಿಕೊಡಬೇಕೆಂದು ಹೇಳಿದರೆ ನನಗೆ ಆಶ್ಚರ್ಯವಾಗುತ್ತಿದೆ, ಮಾನ್ಯ ಕಾನೂನು ಸಚಿವರಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೆನೆ, ಇಲ್ಲಿ ಕೋಟ್ಯಾಂತರ ರೂಪಾಯಿಗಳ ವ್ಯವಹಾರವಿದೆ. ಅದನ್ನು ಚರ್ಚೆಯಿಲ್ಲದೆ ಪಾಸ್ ಮಾಡುವುದು ಎಂದರೆ ನನಗೆ ಅರ್ಥವಾಗುವುದಿಲ್ಲ. ಮಾನ್ಯ ಅಧ್ಯಕ್ಷರು ಸಭೆಯಲ್ಲಿದ್ದರು, ಮಾನ್ಯ ಖಿರ್ಗಿಯವರೂ ಇದ್ದರು. ಸಪ್ಲಿಮೆಂಟರಿ ಎಸ್ಟಿಮೇಟನ್ನು ಚರ್ಚೆಯಿಲ್ಲದೆ ಪಾಸ್ ಮಾಡಿಕೊಡುವುದು ಎಂದರೆ ಅದು ಸರಿಯಾಗುವುದಿಲ್ಲ. ಮಾನ್ಯ ಮಂತ್ರಿಗಳು ಹೇಳಿರುವುದು ರೆಕಾರ್ಡ್‌ನಲ್ಲಿ ಹೋಗಿದೆ. ನಾನು ಇದರ ಬಗ್ಗೆ ಕೂಲಂಕುಷವಾಗಿ ಚರ್ಚೆಯಾಗಬೇಕೆಂದು ಹೇಳುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್.—ಈಗ ಮೂರು ಬಿಲ್‌ಗಳಿವೆ. ಒಂದೊಂದು ಬಿಲ್‌ಗೆ ೧ ಗಂಟೆಯಂತೆ ಮೂರು ತಾಸು ಸಮಯ ಬೇಕಾಗುತ್ತದೆ. ೬ ಗಂಟೆಗೆ ಒಂದು ಕಾರ್ಯಕ್ರಮ ಬೇರೆ ಇದೆ. ಸಭೆಯನ್ನು ೬ ಗಂಟೆಯ ಮೇಲೆ ನಡಸುವುದಕ್ಕಾಗುವುದಿಲ್ಲ. ಆದ್ದರಿಂದ ಇದನ್ನು ಅಭ್ಯಾಸ ಮಾಡಿಕೊಂಡು ಬಂದಮೇಲೆ, ಚರ್ಚೆಮಾಡಿ ಆಮೇಲೆ ಪಾಸ್ ಮಾಡೋಣ.

ಶ್ರೀ ಎಸ್. ಬಂಗಾರಪ್ಪ.—ಇದನ್ನು ನಾಳೆ ತೆಗೆದುಕೊಳ್ಳೋಣ.

ಅಧ್ಯಕ್ಷರು. — ನೋಡೋಣ.

ಶ್ರೀ ಕೆ. ಎಚ್. ಪಾಟೀಲ್.—ಇವೊತ್ತು ಸಪ್ಲಿಮೆಂಟರಿ ಎಸ್ಟಿಮೇಟ್ ತೆಗೆದುಕೊಳ್ಳುವುದು ಬೇಡ. ಬಿಲ್‌ಗಳನ್ನು ತೆಗೆದುಕೊಳ್ಳೋಣ. ಮೂರು ಬಿಲ್‌ಗಳನ್ನು ಪಾಸ್ ಮಾಡೋಣ.

ಅಧ್ಯಕ್ಷರು.—ಅದನ್ನು ವಿಚಾರ ಮಾಡೋಣ. ಈಗ ಮುಂದೆ ಹೋಗೋಣ.

ಶ್ರೀ ಕೆ. ಎಚ್. ಪಾಟೀಲ್.—ನೋಡೋಣ, ಮಾಡೋಣ ಎಂದರೆ ಏನು ಅರ್ಥ ?

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಸಹ ನಿನ್ನೆ ನಡೆದಂತಹ ಸಭೆಯಲ್ಲಿದ್ದೆ. ಮಾನ್ಯ ಮುಖ್ಯ ಮಂತ್ರಿಗಳು ಪ್ರಾರ್ಥನೆ ಮಾಡಿಕೊಂಡ ಹಾಗೆ, ಅಪ್ರೋಪ್ರಿಯೇಷನ್ ಬಿಲ್ ಮಾತ್ರ ಪಾಸ್ ಮಾಡೋಣ ಪಾಸ್ ಮಾಡದಿದ್ದರೆ ತೊಂದರೆ ಬರುತ್ತದೆನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆ ಸಂದರ್ಭದಲ್ಲಿ ಮಾನ್ಯ ಎಂ. ಎಸ್. ಪಾಟೀಲ್‌ರವರು, ಖಿರ್ಗಿಯವರು ಇದ್ದರು. ಸಪ್ಲಿಮೆಂಟರಿ ಎಸ್ಟಿಮೇಟ್ ವಿಚಾರವಾಗಿ ಯಾವುದೇ ಅಭಿಪ್ರಾಯ ಬರಲಿಲ್ಲ.

ಶ್ರೀ ಲಕ್ಷ್ಮೀಸಾಗರ್.—ತಾವು ಕೇಳಿಸಿಕೊಳ್ಳಲಿಲ್ಲವೆಂದು ಕಾಣುತ್ತದೆ ಎರಡನ್ನೂ ಹೇಳಿದ್ದಾರೆ. I will solve this proble. ನಾಳೆ ಬೆಳಿಗ್ಗೆ ೯ ಗಂಟೆಗೆ ಇದನ್ನು ತೆಗೆದುಕೊಳ್ಳೋಣ. ಏಕೆಂದರೆ ಇದು ಕೌನ್ಸಿಲ್‌ಗೆ ಹೋಗಬೇಕಾಗುತ್ತದೆ.

Mr. SPEAKER.—Your suggestion is accepted.

ಶ್ರೀ ಎಸ್. ಬಂಗಾರಪ್ಪ.—ನಾನು ಸರ್ಕಾರಕ್ಕೆ ಒಪ್ಪಿಗೆ ಕೊಟ್ಟಿದ್ದಕ್ಕಾಗಿ ಅಭಿನಂದಿಸುತ್ತೇನೆ. ನಾಳೆ ಕುದುರೆ ಮೋತಿ ಪ್ರಕರಣ ಮತ್ತು ಬರಗಾಲ ಪ್ರದೇಶಗಳ ಬಗ್ಗೆ ಚರ್ಚೆ ಮಾಡುವುದು ಇದೆ.

೩-೩೦ ಪಿ.ಎಂ.

ನಾವು ರೂಲ್ ೬೮ರ ಕೆಳಗೆ ಬೇರೆ ಬೇರೆ ವಿಷಯಗಳ ಬಗ್ಗೆ ನೋಟೀಸ್‌ಗಳನ್ನು ಕೊಟ್ಟಿದ್ದೇವೆ. ಅವುಗಳನ್ನು ಯಾವಾಗ ತೆಗೆದು ಕೊಳ್ಳುತ್ತೀರಿ ?

ಅಧ್ಯಕ್ಷರು.—ಮಾನ್ಯ ಸಂಸದೀಯ ವ್ಯವಹಾರಗಳ ಮಂತ್ರಿಗಳು ಏನು ಹೇಳುತ್ತಾರೋ ನೋಡೋಣ.

ಶ್ರೀ ಎ. ಲಕ್ಷ್ಮೀಸಾಗರ್.—ವಿರೋಧಪಕ್ಷದ ನಾಯಕರಾದ ಶ್ರೀಮಾನ್ ಬಂಗಾರಪ್ಪನವರು ಇವತ್ತು ಬೆಳಿಗ್ಗೆ ಎರಡು ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಒಂದು ಕುದುರೆ ಮೋತಿ ಬಗ್ಗೆ ಕೊಟ್ಟಿರತಕ್ಕಂತಹ ವರದಿಯಮೇಲೆ ಚರ್ಚೆ ಮಾಡುವುದು ಹಾಗೂ ಬರಗಾಲದ ಪರಿಸ್ಥಿತಿಯ ಮೇಲೆ ಚರ್ಚೆ ಮಾಡುವ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ.

ಅಧ್ಯಕ್ಷರು.—ಇವೊತ್ತು ಸಂಜೆ ಸಭಾ ಸಲಹಾ ಸಮಿತಿಯನ್ನು ಕರೆದು ಅದರಲ್ಲಿ ಚರ್ಚೆಮಾಡೋಣ.

ಶ್ರೀ ಎ. ಲಕ್ಷ್ಮೀಸಾಗರ್.—ಆಗಬಹುದು.

ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು.—ಯಾವ ವಿಷಯವನ್ನು ಪ್ರಾತಸ್ತಾಡುತ್ತೀರಿ ? ನೋಟೀಸ್ ಇಲ್ಲದೆ ಈ ರೀತಿ ಮಾತನಾಡಿದರೆ ಹೇಗೆ ?

ಶ್ರೀ ಯು. ಭೂಪತಿ.—ಅದೇ ಬಂದಿರುವುದು ನಮಗೆ ತಾಪತ್ರಯ. ನಮಗೆ ಗೊತ್ತಿಲ್ಲದೆ ಕುದುರೆ ಮೋತಿ ಪ್ರಕರಣದ ಬಗ್ಗೆ ನೇಮಿಸಿದಂತಹ ಸದನದ ಸಮಿತಿಯು ವರದಿಯನ್ನು ಕೊಟ್ಟಿದೆ. ನಾವೆಲ್ಲ ಆ ಸಮಿತಿಯ ಸದಸ್ಯರು.

ಅಧ್ಯಕ್ಷರು.— ನೋಟೀಸ್ ಕೊಡದೆ ಏಕಾ ಏಕಿ ಎದ್ದು ಯಾವುದೋ ವಿಚಾರವನ್ನು ಪ್ರಸ್ತಾಪ ಮಾಡುವುದಾದರೆ ಸದನದ ಕಾರ್ಯಕಲಾಪಗಳನ್ನು ಯಾವ ರೀತಿ ನಡಸಬೇಕು ? ಆ ಬಗ್ಗೆ ನೋಟೀಸ್ ಕೊಡಿ,ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಬಿ. ಸ್ವಾಮಿರಾವ್.—ಸದನದ ಸಮಿತಿಯನ್ನು ರಚಿಸಿದ್ದು.....

ಅಧ್ಯಕ್ಷರು.—ಸಮಿತಿಯವರು ಸದನದಲ್ಲಿ ಆ ವರದಿಯನ್ನು ಮಂಡಿಸಿದ್ದಾರೆ. ಇವೊತ್ತು ಸಂಜೆ ಸಭಾ ಸಲಹಾ ಸಮಿತಿಯನ್ನು ಕರೆದಿದ್ದೇನೆ. ಅದರಲ್ಲಿ ಕುಳಿತು ಚರ್ಚೆ ಮಾಡೋಣ.

ಶ್ರೀ ಬಿ. ಸ್ವಾಮಿರಾವ್.—ನಮಗೆ ಗೊತ್ತಿಲ್ಲದೆ ವರದಿಯನ್ನು ಇಲ್ಲಿ ಪ್ರೆಸೆಂಟ್ ಮಾಡಿದ್ದಾರೆ.

ಅಧ್ಯಕ್ಷರು.—ಇವೊತ್ತು ಬೆಳಿಗ್ಗೆಯೇ ನನ್ನ ಜೊತೆ ತಾವು ಮಾತನಾಡಬಹುದಿತ್ತು. ಅದನ್ನೂ ತಾವು ಮಾಡಿಲ್ಲ. ಸಭಾ ಸಲಹಾ ಸಮಿತಿಯನ್ನು ಕರೆದಿದ್ದೇನೆ. ಕುದುರೆಮೋತಿ ಪ್ರಕರಣ ಮತ್ತೆ ಬರಗಾಲ ಪರಿಸ್ಥಿತಿಯ ಬಗ್ಗೆ ಯಾವಾಗ ಚರ್ಚೆ ಮಾಡಬೇಕೆಂಬುದನ್ನು ತೀರ್ಮಾನ ಮಾಡೋಣ.

ಶ್ರೀ ಎಸ್. ಬಂಗಾರಪ್ಪ.—ಇದು ಸಭಾ ಸಲಹಾ ಸಮಿತಿಯಲ್ಲಿ ತೀರ್ಮಾನ ಮಾಡುವುದಕ್ಕೆ ಬರುವುದಿಲ್ಲ. ಮಾನ್ಯ ಸದಸ್ಯರಾದ ಸ್ವಾಮಿರಾವ್‌ರವರು ಹಾಗೂ ಶ್ರೀಮಾನ್ ಯು. ಭೂಪತಿಯವರು ಆ ಸದನದ ಸಮಿತಿಯ ಸದಸ್ಯರಾಗಿದ್ದು ಅವರ ಅಭಿಪ್ರಾಯವನ್ನು ತೆಗೆದುಕೊಳ್ಳದೆ ವರದಿಯನ್ನು ಸದನದಲ್ಲಿ ಮಂಡಿಸಿದ್ದಾರೆಂಬುದು ಅವರ ಅಭಿಪ್ರಾಯವಾಗಿದೆ. ಸದನದ ಸಮಿತಿಯು ತನ್ನ ವರದಿಯನ್ನು ಮಂಡನೆ ಮಾಡಬೇಕಾದರೆ: ಆ ಸಮಿತಿಯ ಸದಸ್ಯರ ಅಭಿಪ್ರಾಯವನ್ನು ಪಡೆದು ನಂತರ ವರದಿಯನ್ನು ಮಂಡನೆ ಮಾಡುವಂತದ್ದು ಸಂಪ್ರದಾಯ ಆದರೆ ಸದಸ್ಯರ ಅಭಿಪ್ರಾಯವನ್ನೇ ತೆಗೆದು ಕೊಳ್ಳದೆ, ಆ ಸದಸ್ಯರಿಗೆ ಗೊತ್ತಿಲ್ಲದೇ ಈ ವರದಿಯನ್ನು ಇಲ್ಲಿ ಮಂಡನೆ ಮಾಡಿದ್ದಾರೆಂಬುದಾಗಿ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅದನ್ನು ಅವರು ಎಲ್ಲಿ ಹೇಳಬೇಕು ? ಅದಕ್ಕೆ ಅವರು ಏನು ಮಾಡಬೇಕು

ಅಧ್ಯಕ್ಷರು.—ನಾಳೆ ಈ ವರದಿಯ ಬಗ್ಗೆ ಚರ್ಚೆ ಮಾಡುವ ಸಮಯದಲ್ಲಿ ಅವರ ಅಭಿಪ್ರಾಯವನ್ನು ಹೇಳುವುದಕ್ಕೆ ಬರುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಸಮಿತಿಯ ಸದಸ್ಯರಾಗಿರತಕ್ಕಂತಹವರು ಅದರ ಬಗ್ಗೆ ಭಾಷಣ ಮಾಡುವುದಕ್ಕೆ ಬರುವುದಿಲ್ಲ. ಅವರ ಅಭಿಪ್ರಾಯವನ್ನು ಹೇಳಲು ತಮ್ಮ ಅಪ್ಪಣೆಯನ್ನು ಪಡೆದಿದ್ದಾರೆ ತಾವು ಅಪ್ಪಣೆಯನ್ನು ಕೊಟ್ಟಿದ್ದೀರಿ. ಆ ಕೆಲಸವನ್ನು ಅವರು ಮಾಡುತ್ತಾರೆ.

ಅಧ್ಯಕ್ಷರು.—ಯಾವ ರೂಲ್ಸ್ ಪ್ರಕಾರ ? ಎಂದಾದರೂ ತಾವು ಹೇಳಬೇಕಲ್ಲವೇ ?

ಶ್ರೀ ಎಸ್. ಬಂಗಾರಪ್ಪ.—ತಮ್ಮ ಒಪ್ಪಿಗೆಯ ಮೇಲೆ.

ಅಧ್ಯಕ್ಷರು.—ಯಾವುದೇ ವಿಚಾರವಾಗಲಿ ನೋಟೀಸ್ ಕೊಡದೆ ಆ ರೀತಿ ಚರ್ಚೆ ಮಾಡುವುದಕ್ಕೆ ಬರುವುದಿಲ್ಲ. ನಾನು ಅಪ್ಪಣೆ ಕೊಡುವುದಿಲ್ಲ. ದಯವಿಟ್ಟು ತಾವು ಕುಳಿತುಕೊಳ್ಳಿ.

ಶ್ರೀ ಎಸ್.ಎಂ. ಕೃಷ್ಣ.—ಕೆಂದುರೆ ಮೋತಿ ಪ್ರಕರಣದ ಪರದಿಯನ್ನು ಏನು ಕೊಟ್ಟಿದ್ದಾರೆ, ಅದು ಪರದಿಯೇ ಆಗುವುದಿಲ್ಲ. ಏಕೆಂದರೆ ಯಾವುದೇ ಪರದಿಯನ್ನು ಮಂಡಿಸಬೇಕಾದರೆ. ಆ ಸಮಿತಿಯಲ್ಲಿ ದ್ದಂತಹ ಎಲ್ಲಾ ಸದಸ್ಯರ ಸಹಿಯನ್ನು ಹಾಕಿ ಆದರಲ್ಲಿ ಯಾರು ಅಧ್ಯಕ್ಷರಾಗಿರುತ್ತಾರೋ ಅವರು ಪರದಿಯನ್ನು ಸಲ್ಲಿಸುತ್ತಾರೆ. ಆದರೆ ಇಲ್ಲಿ ಏನಾಗಿದೆ ಎಂದರೆ ಆ ಸಮಿತಿಯಲ್ಲಿ ಯಾರು ಸದಸ್ಯರಾಗಿದ್ದಾರೊ ಅವರಿಗೇ ಇದು ಗೊತ್ತಿಲ್ಲ. ಅವರ ಪಕ್ಷದವರೇ ಸೇರಿಕೊಂಡು ಮಾಡಿಬಿಟ್ಟಿದ್ದಾರೆ. ಆದ್ದರಿಂದ ಇದು ಪರದಿಯಾಗುವುದಿಲ್ಲ. ಇದು ಪರದಿಯಾಗಿಲ್ಲದಿರುವಾಗ ಅದರ ಮೇಲೆ ಚರ್ಚೆ ಮಾಡುವಂತಹ ಪ್ರಶ್ನೆ ಎಲ್ಲಿದೆ ? ಸಮಿತಿಯ ಸಂಬಂಧಪಟ್ಟ ಸದಸ್ಯರಿಗೆ ಕರಡು ಪರದಿಯನ್ನು ಕಳುಹಿಸಿ ಅವರು ಅದಕ್ಕೆ ಒಪ್ಪಿಗೆಯನ್ನು ಕೊಟ್ಟು ನಂತರ ಸದನದಲ್ಲಿ ಅದನ್ನು ಮಂಡಿಸಿದ ಮೇಲೆ ನಂತರ ನಾವು ಯೋಚನೆ ಮಾಡಬೇಕಾಗುತ್ತದೆ. ಅದಕ್ಕಾಗಿ ತಮಗೆ ವಿಶೇಷ ಅಧಿಕಾರ ಇದೆ. ಅದನ್ನು ಉಪಯೋಗ ಮಾಡಿ, ಇದನ್ನು ಪುನಃ ಸಮಿತಿಯಲ್ಲಿ ಚರ್ಚೆ ಮಾಡಿ ಎಂಬುದಾಗಿ ಅವರಿಗೆ ಹೇಳಿ.

LEGISLATIVE BUSINESS

THE KARNATAKA PUPBLIC MONEYS(RECOVERY OF DUES) (AMENDMENT)BILL, 1985.

Motion to Consider

SRI A. LAKMISAGAR.—(MINISTER FOR LAW & PARLIMENTARY AFFIARS & URBAN DEVELOPMENT).—Sir, I beg to move.

> "That Amendment adopted by the Legislative Council to Clause 2 of the Karnataka Public Moneys (Recovery of Dues)(Amendment)Bill, 1985, as required under rule 110 of Rules of procedure and Conduct of Business in the Legislative Assembly be taken in to Consideration."

Question was Proposed

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ಹಿಂದೆ ಈ ಸನ್ಮಾನ್ಯ ಸಭೆಯು ಇದ್ದರೆ ತನ್ನ ಒಪ್ಪಿಗೆಯನ್ನು ಕೊಟ್ಟಿತ್ತು. ಅದು ಮೇಲ್ಮನೆಯಲ್ಲಿ ಒಪ್ಪಿಗೆಯನ್ನು ಪಡೆಯುವುದಕ್ಕೆ ಹೋದಂತಹ ಸಂದರ್ಭದಲ್ಲಿ ಅವರು ಮಾಡಿದಂತಹ ಒಂದು ಸಲಹೆ ಎಂದರೆ, ಈ ಮನೆಯಲ್ಲಿ ಪಾಸವಾದಂತಹ ತಿದ್ದುಪಡಿ ಮಸೂದೆಯಲ್ಲಿ " ಪ್ರಿಸ್ಕ್ರೈಬ್ಡ್ ರೇಟ್ " ಎಂದು ಇತ್ತು. ಅದು ಸರಿಯಲ್ಲವೆಂದು " ಅಗ್ರೀಡ್ ರೇಟ್ " ಎಂದು ಬದಲಾವಣೆ ಮಾಡಿದ್ದಾರೆ. ಅಷ್ಟೇ ಇದರಲ್ಲಿ ಬದಲಾವಣೆ ಯಾಗಿರುವಂತದ್ದು. ಮೇಲ್ಮನೆಯಲ್ಲಿ ಸದಸ್ಯರು ಏನು ಅಭಿಪ್ರಾಯ ಕೊಟ್ಟರು ಎಂದರೆ ಹಣವನ್ನು ಕೊಡತಕ್ಕಂತವರು ತುಂಬಾ ಪ್ರಭಾವ ಇರುವಂತಹವರು ಇದ್ದರೆ ಅದರ ಆಧಾರದ ಮೇಲೆ ಬಡ್ಡಿಯನ್ನು ಜಾಸ್ತಿಮಾಡತಕ್ಕ ಸನ್ನಿವೇಶ ಬರಬಹುದು ಎನ್ನತಕ್ಕಂತಹ ಸಂಶಯದ ಆಧಾರದ ಮೇಲೆ ಇದನ್ನು ಸ್ವಲ್ಪ ಬದಲಾಯಿಸಬೇಕು ಎನ್ನತಕ್ಕಂತ ಮಾತನ್ನು ಅವರು ಹೇಳಿದ್ದಾರೆ. ಈಗಾಗಲೇ ರಿಸರ್ವ್ ಬ್ಯಾಂಕಿನವರು ಇದರ ಬಗ್ಗೆ ತುಂಬಾ ಗೈಡ್‌ಲೈನ್ಸ್‌ಗಳನ್ನು ಕೊಟ್ಟಿದ್ದಾರೆ. ಯಾವ ಯಾವ ಬಾಬುಗಳಿಗೆ ಸಂಬಂಧ